ಕಾರ್ಯದಕ್ಷತೆ ಹೆಚ್ಚಿಸಲು ತರಬೇತಿ ಅಗತ್ಯ: ಸುರೇಶ್

ವಿಜ್ಞಾನಿಗಳಿಗೆ ಬೆಂಗಳೂರು ಕೃಷಿ ವಿವಿಯಿಂದ ಪುನಶ್ಚೇತನ ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪುನಶ್ಚೇತನ ತರಬೇತಿಯು ವಿಜ್ಞಾನಿಗಳ ಕಾರ್ಯದಕ್ಷತೆ ಹೆಚ್ಚಿಸಲು ಅವಶ್ಯಕ ಮತ್ತು ಅನಿವಾರ್ಯವಾಗಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ ಅಭಿಪ್ರಾಯಪಟ್ಟರು.

ಹೆಬ್ಬಾಳದ ಜಿಕೆವಿಕೆಯಲ್ಲಿ ಕೃಷಿ ವಿವಿ ವ್ಯಾಪ್ತಿಯ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳಿಗೆ ಆಯೋಜಿಸಿದ್ದ ಪುನಶ್ಚೇತನ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ವಿವಿಗಳ ಸಂಶೋಧನೆಯ ಫಲಗಳು ರೈತರಿಗೆ ಶೀಘ್ರವಾಗಿ ತಲುಪಲು ವಿಜ್ಞಾನಿಗಳು, ವಿಸ್ತರಣಾ ಅಧಿಕಾರಿಗಳು ಶ್ರಮಿಸಬೇಕು. ರೈತರ ಯಶೋಗಾಥೆಗಳನ್ನು ಪ್ರಕಟಿಸುವ ಮೂಲಕ ಕೃಷಿಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೃಷಿ ಮಾಹಿತಿಯ ಕೈಪಿಡಿ ಬಿಡುಗಡೆಗೊಳಿಸಲಾಯಿತು. ಭಾರತೀಯ ಕೃಷಿ ಅನುಸಂಧಾನ ಪರಿಷತ್ ನಿರ್ದೇಶಕ ಡಾ.ವಿ.ವೆಂಕಟ ಸುಬ್ರಮಣಿಯನ್, ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ಎಂ.ಜೆ.ಚಂದ್ರೇಗೌಡ, ಡಾ.ಡಿ.ವಿ.ಶ್ರೀನಿವಾಸ ಡಾ.ವಿ.ಎಲ್.ಮಧುಪ್ರಸಾದ್, ವಿಜ್ಞಾನಿಗಳಾದ ರೆಡ್ಡಿ ಮತ್ತಿತರರು ಹಾಜರಿದ್ದರು.



ಬೆಂಗಳೂರು ಕೃಷಿ ವಿವಿಯು ಹೆಬ್ಬಾಳದ ಜಿಕೆವಿಕೆಯಲ್ಲಿ ವಿಜ್ಞಾನಿಗಳಿಗೆ ಆಯೋಜಿಸಿದ್ದ ಪುನಶ್ಚೇತನ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ಕೈಪಿಡಿ ಬಿಡುಗಡೆಗೊಳಿಸಲಾಯಿತು. ಡಾ। ಎಸ್.ವಿ.ಸುರೇಶ ಉಪಸ್ಥಿತರಿದ್ದರು.

13-07-2023
KannadaprabhaPg 05

14-07-2023
Vijayavani Pg 2B

ರಾಗಿ, ಭತ್ತದ ತಳಿಗೆ ಮಾದೇಗೌಡ ಹೆಸರು

ಮಂಡ್ಯ: ರಾಗಿ ಅಥವಾ ಭತ್ತದ ತಳಿಗೆ ರಾಜ್ಯದ ಹಿರಿಯ ಮುತ್ಸದ್ದಿ, ರೈತ ಹೋರಾಟಗಾರ ದಿವಂಗತ ಡಾ. ಜಿ. ಮಾದೇಗೌಡರ ಹೆಸರಿಡಲು ಕ್ರಮ ವಹಿಸುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕುಲಪತಿ ಮತ್ತು ಕೃಷಿ ಇಲಾಖೆ ಕಾರ್ಯದರ್ಶಿಗೆ ಜಿಲ್ಲಾ ಉಸ್ತುವಾರಿ ಕೃಷಿ ಸಚಿವ ಚಲುವರಾಯಸ್ವಾಮಿ ಸೂಚಿಸಿದ್ದಾರೆ.

» ಕೃಷಿ ಸಚಿವರ ಸೂಚನೆ

ನಗರದಲ್ಲಿ ಆಯೋಜಿಸಿದ್ದ ಡಾ. ಜಿ. ಮಾದೇಗೌಡ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ಎಂಎಲ್‌ಸಿ ದಿನೇಶ್ ಗೂಳಿಗೌಡ ಈ ವಿಷಯದ ಬಗ್ಗೆ ಕೃಷಿ ಸಚಿವರ ಗಮನ ಸೆಳೆದಿದ್ದರು. ಮಾದೇಗೌಡರು 60 ವರ್ಷ ಶೈಕ್ಷಣಿಕವಾಗಿ, ರಾಜಕೀಯವಾಗಿ ಹತ್ತು ಹಲವು ಕೊಡುಗೆ ನೀಡಿದ್ದಾರೆ. ಅವರ ಹೆಸರು ಮುಂದಿನ ಪೀಳಿಗೆಗೆ ಚಿರಸ್ಥಾಯಿಯಾಗಿ ಉಳಿಯಲು ಭತ್ತ ಅಥವಾ ರಾಗಿ ತಳಿಗೆ ಅವರ ಹೆಸರನ್ನು ನಾಮಕರಣ ಮಾಡಬೇಕು ಎಂದು ಮನವಿ ಮಾಡಿದ್ದರು. ಮನವಿಗೆ ಅದೇ ಕಾರ್ಯಕ್ರಮದಲ್ಲಿ ಚಲುವರಾಯಸ್ವಾಮಿ ಸ್ಪಂದನೆ ನೀಡಿದ್ದರು. ತುರ್ತಾಗಿ ಈ ಬಗ್ಗೆ ಕ್ರಮ ವಹಿಸುವುದಾಗಿಯೂ ಹೇಳಿದ್ದರು.

ಅದರಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸಚಿವರ ಸ್ಪಂದನೆಗೆ ದಿನೇಶ್ ಗೂಳಿಗೌಡ ಅಭಿನಂದಿಸಿದ್ದಾರೆ.

ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು

ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೆ, ಬೆಂಗಳೂರು-560065.

ಸಂ:ಇ.ಒ/ಎಸ್.ಪಿ.ಒ/ಇ-ಪ್ರೊಕ್ಯೂರ್‌ಮೆಂಟ್/138/2023-24 ದಿನಾಂಕ:10.07.2023

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು ಕ್ರಮ ಸಂಖ್ಯೆ 1 ರಿಂದ 9 ರ ವರೆವಿಗೆ ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ-1 ಮತ್ತು ಕೆ.ಜಿ-2 ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **kppp.karnataka.gov.in** ಮುಖಾಂತರ ಬಾಗವಹಿಸಬಹುದು. ಕೆ.ಜಿ-1, ಮತ್ತು ಕೆ.ಜಿ-2 ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೋಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 24.07.2023 ಸಂಜೆ 4:00 ಗಂಟೆಯವರೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 26.07.2023 ಬೆಳಗ್ಗೆ 10:30,** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **www.uasbangalore.edu.in** or **kppp.karnataka.gov.in** ಮತ್ತು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 91-8046010000, +91-8068948777 ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ.ಎಸ್. ಜಿ.ಕೆ.ವಿ.ಕೆ., ಬೆಂಗಳೂರು-560065. ದೂರವಾಣಿ ಸಂಖ್ಯೆ: 080-23630128 ಸಂಪರ್ಕಿಸಿ.

ಸಹಿ/-
ಆಸ್ತಿ ಅಧಿಕಾರಿಗಳು.

ವಾಸಾಸಂ/ವಾಪ್ರ/ಜಿಎ/532/2023-24

14-07-2023
Vijayavani Pg 07

Armed forces canteens to get new millet-based menu from FSSAI

KAVITA BAJELI-DUTT @ New Delhi

IN A move to promote healthy food practices among the defence personnel, the Ministry of Defence has decided to include a millet-based menu in the messes, canteens and other food outlets of armed forces.

The ministry has signed a Memorandum of Understanding with the Food Safety and Standards Authority of India (FSSAI) on this on Thursday.

The agreement was signed by Union Defence Minister Rajnath Singh and Health Minister Mansukh Mandaviya. Lieutenant General Preet Mohinder Singh, director general (supplies and transport) from the defence ministry and Inoshi Sharma, executive director, FSSAI, were also present.

According to a statement issued by the Union Health Ministry, the move aims to create awareness about the nutritional benefits of diet diversity and millet-based food products among the personnel. "This collaboration will also ensure training of food handlers and chefs of mess, canteens and other food outlets of the armed forces on food safety and hygiene, as per the Food Safety and Standards Act, 2006," the statement said.

"It signifies a shared commitment to the health and well-being of the armed forces to enable them to remain strong and resilient in their service to the nation," it said, adding that it will also encourage the families of the armed forces to adopt nutritious diets.

Given the challenging terrains and varied climatic conditions faced by the defence personnel, the significance of variety in diet assumes great importance. Millets are known for their nutritional value and can contribute to a well-balanced and diverse diet, the statement added.

The two Union ministers also unveiled a book titled 'Healthy Recipes for Defence' to promote the consumption of 'Shree Anna' or millets, and its health benefits. The book, developed by FSSAI, includes a range of millet-based dishes. It will be a valuable resource for the food outlets of defence ministry.



Cereal suitable for defence personnel

Given the challenging terrains and varied climatic conditions faced by the defence personnel, the significance of variety in diet assumes great importance. Millets are known for their nutritional value and can contribute to a well-balanced and diverse diet, the Health Ministry stated.

14-07-2023
Ind Exp Pg 09

14-07-2023
Vijayavani Pg 2.B

ಟೊಮ್ಯಾಟೊ ಬೆಲೆ ಹೆಚ್ಚಳ ಕಾರಣ 15 ಕೆಜಿ ಬಾಕ್ಸ್‌ಗೆ ₹2 ಸಾವಿರ

ಕೋಲಾರ ಎಪಿಎಂಸಿಗೆ ಪೊಲೀಸ್ ಭದ್ರತೆ

ಕೋಲಾರ: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ 15 ಕೆಜಿ ಟೊಮ್ಯಾಟೊ ಬಾಕ್ಸ್‌ಗೆ 2,000 ರೂಪಾಯಿ ಗಡಿ ದಾಟಿರುವ ಹಿನ್ನೆಲೆಯಲ್ಲಿ ಟೊಮ್ಯಾಟೊ ಸಾಗಿಸುತ್ತಿರುವ ವಾಹನ ಹಾಗೂ ಎಪಿಎಂಸಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಟೊಮ್ಯಾಟೊ ಬೆಲೆ ದಿನೇದಿನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾತ್ರಿ ವೇಳೆ ರೈತರ ತೋಟಗಳಲ್ಲಿ ಕಳ್ಳತನ ಪ್ರಕರಣಗಳು ಬೆಳಕಿಗೆ ಬಂದಿವೆ. ಅಲ್ಲದೆ ಆಂಧ್ರಪದೇಶದಿಂದ ಕೋಲಾರ ಎಪಿಎಂಸಿಗೆ ಟೊಮ್ಯಾಟೊ ತರುತ್ತಿದ್ದ ವಾಹನ ತಡೆದು ಟೊಮ್ಯಾಟೊ ಬಾಕ್ಸ್‌ಗಳನ್ನು ದರೋಡೆ ಮಾಡುತ್ತಿರುವ ಪ್ರಕರಣಗಳೂ ನಡೆಯತೊಡಗಿವೆ. ಈ ಹಿನ್ನೆಲೆಯಲ್ಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ರಾತ್ರಿ ವೇಳೆ ಟೊಮ್ಯಾಟೊ ತರುವ ಟೆಂಪೋಗಳಿಗೆ ಹೈವೇ ಮತ್ತು ಜಿಲ್ಲಾ, ತಾಲೂಕು ಪ್ರಮುಖ ರಸ್ತೆಗಳಲ್ಲಿ ಸಂಚಾರ ಪೊಲೀಸರ ಕಾವಲು ಹಾಕಲಾಗಿದೆ. ಇದಲ್ಲದೆ, ಟೊಮ್ಯಾಟೊ ತೋಟಗಳಲ್ಲಿ ಕಳವಿನ ಅನುಮಾನ ಕಂಡುಬಂದರೆ ಠಾಣೆಗೆ ಮಾಹಿತಿ ನೀಡುವಂತೆ ರೈತರಿಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.



ಪೊಲೀಸ್ ಬಂದೋಬಸ್ತ್‌ನಲ್ಲಿ ಟೊಮ್ಯಾಟೊ ಹರಾಜು ನಡೆಯಿತು.

ಎಪಿಎಂಸಿ ಆವರಣದಲ್ಲಿ ಈಗಾಗಲೆ ಹೊರಠಾಣೆ ತೆರೆಯಲಾಗಿದ್ದು, ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ. ಎಪಿಎಂಸಿ ಮಾರುಕಟ್ಟೆಗೆ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಇದುವರೆಗೂ ಕೋಲಾರ ಎಪಿಎಂಸಿ ಅಥವಾ ರಸ್ತೆಗಳಲ್ಲಿ ಸಾಗಾಣಿಕೆ ವಾಹನಗಳ ತಡೆದು ದರೋಡೆ ನಡೆದಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಪಕ್ಕದ ಆಂಧ್ರಪ್ರದೇಶದಲ್ಲಿ ನಡೆದಿರಬಹುದು. ನಮ್ಮಲ್ಲಿ ಆ ರೀತಿ ಆಗದಂತೆ ಎಚ್ಚರಿಕೆ ವಹಿಸಲಾಗಿದೆ.

ಎಂ.ನಾರಾಯಣ್ ಪೊಲೀಸ್ ವರಿಷ್ಠಾಧಿಕಾರಿ, ಕೋಲಾರ

ಕೋಲಾರ ಎಪಿಎಂಸಿಗೆ ವಿಶೇಷ ಪೊಲೀಸ್ ಭದ್ರತೆ ಒದಗಿಸಲು ಯಾವುದೇ ಮನವಿ ಮಾಡಿಲ್ಲ. ಟೊಮ್ಯಾಟೊ ಬೆಲೆ ಏರಿಕೆಯಾಗಿರುವುದರಿಂದ ಪೊಲೀಸ್ ವರಿಷ್ಠಾಧಿಕಾರಿಗಳು ಕ್ರಮ ಕೈಗೊಂಡಿರಬಹುದು. ಈಗಾಗಲೆ ಎಪಿಎಂಸಿ ಆವರಣದಲ್ಲಿ ಪೊಲೀಸ್ ಹೊರಠಾಣೆ ಇದೆ. ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ನಮ್ಮಲ್ಲಿಯೂ ಭದ್ರತಾ ಸಿಬ್ಬಂದಿ ನೇಮಿಸಲಾಗಿದೆ. ಇದುವರೆಗೂ ಅಹಿತಕರ ಪ್ರಕರಣಗಳು ನಡೆದಿಲ್ಲ.

ವಿಜಯಲಕ್ಷ್ಮೀ ಎಪಿಎಂಸಿ ಕಾರ್ಯದರ್ಶಿ, ಕೋಲಾರ

34% ಮಳೆ ಕೊರತೆ, 33% ಮಾತ್ರ ಬಿತ್ತನೆ | 82 ಲಕ್ಷ ಹೆಕ್ಟೇರ್ ಪೈಕಿ 26 ಲಕ್ಷ ಹೆಕ್ಟೇರ್‌ನಲ್ಲಿ ನಿಂತಿದೆ ಪೈರು

ಕೈಕೊಟ್ಟ ಉದ್ದು, ಹೆಸರು

■ ರವಿಕುಮಾರ ಬೆಟ್ಟದಪುರ ಬೆಂಗಳೂರು
ravi.kumar6@timesgroup.com

ರಾಜ್ಯದ ಕರಾವಳಿ, ಮಲೆನಾಡು, ಬೆಂಗಳೂರು ಸೇರಿದಂತೆ ಕೆಲವು ಭಾಗಗಳಲ್ಲಿ ಮಳೆಯದ್ದೇ ಸುದ್ದಿಯಾದರೂ, ರಾಜ್ಯದ ಉಳಿದ ಭಾಗಗಳಲ್ಲಿ ಬರದಂಥ ಛಾಯೆ ಕಾಣಿಸಿಕೊಂಡಿದೆ. ಮುಂಗಾರು ಮಳೆ ತಡವಾಗಿರುವುದಂತೂ ಬಿತ್ತನೆ ಕಾರ್ಯದ ಮೇಲೂ ತೀವ್ರ ಪರಿಣಾಮ ಬೀರಿದೆ. ವಾಡಿಕೆ ಮಳೆಗಿಂತ ಶೇ.34ರಷ್ಟು ಮಳೆ ಕೊರತೆ ಉಂಟಾಗಿರುವುದರಿಂದ ಇದುವರೆಗೆ ಶೇ.33ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ.

ಇಷ್ಟಾದರೂ ಕೃಷಿ ಇಲಾಖೆ ಮುಂಗಾರು ಬಿತ್ತನೆ ಬಗ್ಗೆ ವಿಶ್ವಾಸ ಹೊಂದಿದೆ. ಉದ್ದು ಮತ್ತು ಹೆಸರು ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆಯಾಗದ ಕಾರಣ ಉತ್ಪಾದನೆಯಲ್ಲಿ ಕಡಿಮೆಯಾಗಬಹುದು. ಉಳಿದಂತೆ ಆಹಾರ ಧಾನ್ಯಗಳನ್ನು ಬಿತ್ತನೆ ಮಾಡಲು ಇನ್ನೂ ಕಾಲಾವಕಾಶವಿದೆ. ಹಾಗಾಗಿ, ಆಹಾರ ಧಾನ್ಯ ನಿರೀಕ್ಷೆಯಷ್ಟು ಬೆಳೆಯಬಹುದು ಎಂಬುದು ಇಲಾಖೆಯ ನಂಬಿಕೆ.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 82.35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಹಾರ ಧಾನ್ಯ ಬಿತ್ತನೆ ಮಾಡುವ ಗುರಿ ಹೊಂದಲಾಗಿತ್ತು. ಆದರೆ, ಮಳೆ ಕೊರತೆಯಿಂದಾಗಿ ಜುಲೈ 7ರವರೆಗೆ 26.82 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಸಮರ್ಪಕ ಮಳೆಯಾದರೂ ಭೌಗೋಳಿಕ ವ್ಯತ್ಯಾಸದಿಂದ ಕೆಲವು ಪ್ರದೇಶಗಳಲ್ಲಿ ಬಿತ್ತನೆ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ನಿರೀಕ್ಷಿತ ಆಹಾರ ಧಾನ್ಯ ಉತ್ಪಾದನೆ ಗುರಿ ಮುಟ್ಟಲು ಅಡ್ಡಿಯಾಗುವ ಸಂಭವವಿದೆ.



ಪ್ರಸಕ್ತ ಸಾಲಿನ ಬಿತ್ತನೆ ಬೀಜ ವಿವರ

■ ಲಭ್ಯತೆ	5.55 ಲಕ್ಷ ಕ್ವಿಂಟಾಲ್
■ ಮಾರಾಟ	2.10 ಲಕ್ಷ ಕ್ವಿಂಟಾಲ್
■ ದಾಸ್ತಾನು	3.44 ಲಕ್ಷ ಕ್ವಿಂಟಾಲ್

ಬೆಳೆದ ಕಬ್ಬನ್ನು ತಾನೇ ನಾಶಪಡಿಸಿದ ರೈತ!

ವಿಜಯಪುರ: ಮಳೆ ಕೈಕೊಟ್ಟಿದ್ದರಿಂದ ನೀರಿನ ಕೊರತೆ ಉಂಟಾಗಿ ಹೊಲದಲ್ಲಿ ಒಣಗಿ ನಿಂತಿದ್ದ 7 ಎಕರೆ ಕಬ್ಬು ಬೆಳೆಯನ್ನು ಢವಳಗಿ ರೈತರೊಬ್ಬರು ತಾವೇ ನಾಶ ಪಡಿಸಿದ್ದಾರೆ. ಮುದ್ದೇಬಿಹಾಳ ತಾಲೂಕಿನ ಢವಳಗಿ ಗ್ರಾಮದಲ್ಲಿ ಜಮೀನು ಹೊಂದಿರುವ ಬಸರಕೋಡದ ರೈತ ಗುರುನಾಥ ಬಿರಾದಾರ ತಮ್ಮ ಜಮೀನಿನಲ್ಲಿದ್ದ ಕಬ್ಬು ಬೆಳೆಯನ್ನು ಟ್ರ್ಯಾಕ್ಟರ್ ಮೂಲಕ ರೂಟರ್ ಹೊಡೆಸಿ ಅರಗಿಸಿದ್ದಾರೆ.

110 ತಾಲೂಕುಗಳಲ್ಲಿ ಮುಂಗಾರು ಕೊರತೆ

ರಾಜ್ಯದ 20 ಜಿಲ್ಲೆಗಳ 110 ತಾಲೂಕುಗಳಲ್ಲಿ ಮುಂಗಾರು ಕೊರತೆ ಎದುರಾಗಿದೆ. ಆದರಲ್ಲೂ ಒಂದು ಜಿಲ್ಲೆ ಮತ್ತು 27 ತಾಲೂಕುಗಳು ತೀವ್ರ ಬರಗಾಲವನ್ನು ಎದುರಿಸುತ್ತಿವೆ. ಒಂದು ಜಿಲ್ಲೆ ಮತ್ತು 9 ತಾಲೂಕುಗಳಲ್ಲಿ ವಾಡಿಕೆಗಿಂತ ಮಳೆ ಹೆಚ್ಚಾಗಿದೆ. 9 ಜಿಲ್ಲೆಗಳು ಮತ್ತು 79 ತಾಲೂಕುಗಳಲ್ಲಿ ಮಳೆ ಸ್ಥಿತಿ ಉತ್ತಮವಾಗಿದೆ.

ಬಂಕಾಪುರ ಧಾಮದ ನವಿಲುಗಳಿಗೂ ನೀರಿಲ್ಲ!



ಹಾವೇರಿ: ಜಿಲ್ಲೆಯ ಬಂಕಾಪುರ ನವಿಲು ಧಾಮದಲ್ಲಿರುವ ನವಿಲುಗಳು ಕುಡಿಯುವ ನೀರಿಗೂ ಅಲೆಯುವ ಸ್ಥಿತಿ ಎದುರಾಗಿದೆ. ಧಾಮದಲ್ಲಿ ಪ್ರಾಣಿ ಪಕ್ಷಿಗಳಿಗೆಂದು ಅಲ್ಲಲ್ಲಿ ನಿರ್ಮಿಸಿರುವ ನೀರಿನ ತೊಟ್ಟಿಗಳು ಸಹ ನೀರಿಲ್ಲದೇ ಭಣಗುಡುತ್ತಿವೆ. ಧಾಮದಲ್ಲಿ ನೂರಾರು ನವಿಲುಗಳಿದ್ದು, ಆಹಾರ, ನೀರಿಗಾಗಿ ನಿತ್ಯದ ಅಲೆದಾಡುವುದು ಸಾಮಾನ್ಯವಾಗಿದೆ.

14-07-2023
Ind Exp Pg 09

ಮುಂಗಾರು ಆಗಮನ ವಿಳಂಬವಾಗಿರುವುದರಿಂದ ಉದ್ದು ಮತ್ತು ಹೆಸರು ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆಯಾಗಿಲ್ಲ. ಹೀಗಾಗಿ ಉತ್ಪಾದನೆಯಲ್ಲಿ ಕಡಿಮೆಯಾಗಬಹುದು.

-ಡಾ. ಜೆ.ಟಿ. ಪುತ್ರ ನಿರ್ದೇಶಕ, ಕೃಷಿ ಇಲಾಖೆ

14-07-2023
V-karanataka Pg 01

14-07-2023
Udayavani Pg 01

90 ರೂ.ಗಳಿಂದ 100 ರೂ. ವರೆಗೆ ಇದ್ದ ಬೆಲೆ | ಪ್ರತಿ ಕೆಜಿ ಮೇಲೆ ಸರಾಸರಿ 30ರಿಂದ 40 ರೂ. ಹೆಚ್ಚಳ

ಟೊಮಾಟೊ ಆಯ್ತು ಈಗ ಹುಣಸೆ ಹೆಚ್ಚು ಹುಳಿ

• ಕಾಗತಿ ನಾಗರಾಜಪ್ಪ

ಚಿಕ್ಕಬಳ್ಳಾಪುರ: ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ಟೊಮಾಟೊ ದರ ಕೈ ಸುಡುತ್ತಿದೆ. ಅದಕ್ಕೆ ಪರ್ಯಾಯವಾಗಿ ಸ್ಥಳೀಯವಾಗಿಯೇ ಇರುವ ಹುಣಸೇ ಹಣ್ಣನ್ನು ಬಳಕೆ ಮಾಡುತ್ತಿರುವವರಿಗೆ ಸದ್ದಿಲ್ಲದೆ ಶಾಕ್ ಸಿಕ್ಕಿದೆ. ಅದರ ಬೆಲೆ ಹಠಾತ್ ಆಗಿ ಗಗನಮುಖಿಯಾಗಿದೆ. ಪ್ರತಿ ಕೆಜಿಗೆ 90 ರೂ.ಗಳಿಂದ 100 ರೂ. ಆಸುಪಾಸಿನಲ್ಲಿ ಇದ್ದ ಹುಣಸೇ ಹಣ್ಣಿನ ಬೆಲೆ ಚಿಲ್ಲರೆ ಮಾರುಕಟ್ಟೆಯಲ್ಲಿ 130 ರೂ. 140 ರೂ. ರಿಂದ 150 ರೂ.ವರೆಗೆ ಏರಿಕೆಯಾಗಿದೆ.

15 ಕೆಜಿ ಟೊಮಾಟೊ ಬಾಕ್ಸ್ ದಾಖಲೆಯ 2,000 ರಿಂದ 2,100 ರೂ.ಗಳಿಗೆ ಮಾರಾಟವಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಕೆಜಿ ಟೊಮಾಟೊ 130 ರೂ.ಗಳಿಂದ 140 ರೂ., ಸ್ವಲ್ಪ ಗುಣಮಟ್ಟದ ಟೊಮಾಟೊ 150 ರೂ.ಗೆ ಮಾರಾಟವಾಗುತ್ತಿದೆ. ದರ ಏರಿಕೆಯ ಬಿಸಿಯಿಂದ ತಪ್ಪಿಸಿಕೊಳ್ಳಲು ಹುಣಸೆ ಹಣ್ಣಿನ ಬೆನ್ನು ಬಿದ್ದ ಗ್ರಾಹಕರಿಗೆ ಈಗ ಅದು ಕೂಡ ಮಾರುಕಟ್ಟೆಯಲ್ಲಿ ದುಬಾರಿ ಆಗಿರುವುದು ತಲೆಬಿಸಿಯಾಗಿದೆ.

- ಹಠಾತ್ ಬೆಳವಣಿಗೆಯಿಂದ ಗಲಿಬಿಲಿಗೊಂಡ ಗ್ರಾಹಕ
- ಸದ್ದಿಲ್ಲದೆ ಹೆಚ್ಚಿದ ಸ್ಥಳೀಯ ಹುಣಸೆ ಹಣ್ಣಿನ ಬೆಲೆ
- ಕೋಲ್ಡ್ ಸ್ಟೋರೇಜ್‌ನಲ್ಲಿ ಇರುವುದಕ್ಕೆ ಪ್ರತಿ ಕೆಜಿಗೆ 150 ರೂ. ವರೆಗೆ ದರ
- ಅಡುಗೆಗೆ ಹುಳಿ ರುಚಿ ಹೆಚ್ಚಿಸುವ ಪರ್ಯಾಯ ವಸ್ತುವಿನತ್ತ ಚಿಂತನೆ



ಟೊಮಾಟೊ ದರ ಹೆಚ್ಚಳ ಆಗಿರುವುದರಿಂದ ಬಹಳಷ್ಟು ಗ್ರಾಹಕರು ಹುಣಿಸೆ ಹಣ್ಣು ಖರೀದಿ ಮಾಡುತ್ತಿದ್ದಾರೆ. ಪರಿಣಾಮ ವಾರದಿಂದ ಮಾರುಕಟ್ಟೆಯಲ್ಲಿ ಕೆಜಿ ಹುಣಿಸೆ ಹಣ್ಣು 130, 140 ರೂ.ಗೆ ಮಾರಾಟವಾಗುತ್ತಿದೆ. ಅದಕ್ಕಿಂತ 90, 100 ರೂ.ಗೆ ಕೆಜಿ ಹುಣಿಸೆ ಸಿಗುತ್ತಿತ್ತು. ಟೊಮಾಟೊ ದರ ಏರಿಕೆಯಾದರೆ ಹುಣಿಸೆ ಬೆಲೆ ಹೆಚ್ಚುವ ಸಾಧ್ಯತೆ ಇದೆ.

• ಬಾಬಾಜಾನ್, ಚಿಕ್ಕಬಳ್ಳಾಪುರದ ವ್ಯಾಪಾರಿ

ಈಗಾಗಲೇ ದರ ಏರಿಕೆಯಿಂದ ಕಂಗಾಲಾಗಿರುವ ಸಾರ್ವಜನಿಕರು ತಮ್ಮ ಅಡುಗೆಗೆ ಬೇಕಾಗುವ ವಸ್ತುಗಳ ಪಟ್ಟಿಯಿಂದ ಟೊಮಾಟೊವನ್ನು ಸದ್ಯಕ್ಕೆ ಬದಿಗೆ ಸರಿಸಿದ್ದಾರೆ. ಹುಳಿ ರುಚಿಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಟೊಮಟೋ ಬದಲಾಗಿ ಸ್ಥಳೀಯವಾಗಿಯೇ ಸಿಗುವ ಹುಣಸೆಯತ್ತ ಜನರು ವಾಲಿಕೊಳ್ಳಲಾರಂಭಿಸಿದ್ದರು. ಇದೀಗ ಅದರ ಬೆಲೆ ಕೂಡ ಏರಿಕೆಯಾಗಿದೆ. ಕೋಲ್ಡ್ ಸ್ಟೋರೇಜ್‌ನಲ್ಲಿರುವ ಹುಣಸೆ ಹಣ್ಣಿಗೆ ಹೆಚ್ಚಿನ ಬೇಡಿಕೆ ಇದೆ. ಆ ಶ್ರೇಣಿಗೆ ಮಾರುಕಟ್ಟೆಯಲ್ಲಿ ಪ್ರತಿಕೆಜಿಗೆ 150 ರೂ. ವರೆಗೆ ಇದೆ.

ಟೊಮೊಟೊ ದೆಸೆಯಿಂದಾಗಿ ಕೇಳುವವರೇ ಇಲ್ಲದಂತೆ ಆಗಿದ್ದ ಹುಣಸೇ ಹುಳಿ ಬೇಡಿಕೆ ಪಡೆದು ಖದರು ಹೆಚ್ಚಿಸಿಕೊಂಡಿತ್ತು. ಇದೀಗ ಬೆಲೆ ಏರಿಕೆ ಆಂಶದಿಂದಾಗಿ ಸಾರ್ವಜನಿಕರು ಅಡುಗೆಗೆ ಹುಳಿ ರುಚಿ ನೀಡುವ ನಿಟ್ಟನಲ್ಲಿ ಯಾವುದನ್ನು ಬಳಕೆ ಮಾಡಬೇಕು ಎಂಬ ಬಗ್ಗೆ ಯೋಚನೆಯಲ್ಲಿ ತೊಡಗುವಂತಾಗಿದೆ.

PRODUCTION IN INDIA LIKELY TO FALL 18% THIS YEAR

Every Fourth Bowl of Tur We Eat is Imported; Oz, Brazil to Grow Crop

Imports may hit a record of 9.5-10 L tonnes in 2023-24, nearly 20-25% of local tur consumption

Jayashree.Bhosale
@timesgroup.com

Pune: With Indians ready to pay a hefty price for arhar dal (pigeon pea) for that perfect taste of dal tadka or sambar, farmers in Australia and Brazil will experiment with growing pigeon peas for the Indian consumers. As the imports of tur dal are expected to hit a record of 9.5-10 lakh tonnes in 2023-24, every fourth bowl of tur dal eaten by the Indians will be cooked with imported tur dal, making it a lucrative pulses market for the exporting countries.

India is the world's largest consumer, grower and importer of pulses importing about 20% of the pulses grown in the world, which is the reason why different countries are trying to cater to the growing Indian pulses market.

After remaining between 39 and 43 lakh tonnes per annum during the past three years, this year, the production of tur is expected to fall by over 18% over the previous year to 34.5 lakh tonnes as per the government's estimate. However, the industry believes that the production is much below 30 lakh tonnes.

According to trade estimates, India's pigeon pea imports are expected to record 9.5 to 10 lakh tonnes, accounting for nearly 20-25% of the domestic tur consumption.

India is facing an acute shortage of pigeon pea and urad. Brazil has taken a trial of growing urad for India and this year it is expected to ship about 20,000 tonnes of urad to India. At a recent meeting of Australian Agriculture minister Murray Watt and IPGA, it was decided that the latter would facilitate crop development of pigeon peas in Queensland with the help of Australian trade body Pulse Australia, said IPGA officials.



14-07-2023
Eco times Pg 08

14-07-2023
Dec Hrd Pg 3A

Key takeaways from nutrition summit

Experts from nutrition science, Ayurveda, pulmonology and other fields spoke at the event

AMRIT SALUJA
TEAM METROLIFE

Doctors and fitness coaches busted myths about nutrition and shared insights from new research at a two-day summit in Bengaluru recently.

Following are some of the takeaways from The Edge of Nutrition 2023, organised by Happiest Health, an online platform for health and wellness information.

Weight Loss

You are most likely to lose weight when you eat breakfast like a king, lunch like a prince and dinner like a pauper, nutritionist and author Pooja Makhija said. Citing an Israeli study, she said 700 calories in breakfast, 500 calories in lunch and 200 calories in dinner are ideal.

Get proteins

Dr Nandan Joshi from Dr Reddy's Laboratories said Indians have lower muscle mass, so we must consume the right amount of protein, especially when we enter our 30s.

"Protein is important not just for mobility but also for metabolic functions", said the head medical affairs, Nutrition, India and Emerging Markets of this pharmaceutical firm.

According to Dr Surendra Nath, former principal at National Dairy Research Institute, one needs to consume an average of 60 gm of protein daily, of which 16 gm can come from tea, coffee, yoghurt or buttermilk. Egg is another key source, he added.

Dr Joshi shared the 3:2:1 formula prescribed as 'Recommended Dietary Allowance' by the Food Safety and Standards Authority of India (FSSAI). "This refers to 3 portions of cereals, 2 portions of legumes and 1 portion of milk," he explained, adding that it also promotes healthy ageing. He advises people to take up resistance training as it helps to maintain muscle mass.

Animal meat is a good source of protein but should be cooked lean, said Dr Supraja Chandrasekhar, director of paediatric services at DHEE Hospitals in Bengaluru.

Instagram myths

Krish Ashok, author of 'Masala Lab: The Science of Indian Cooking' countered myths propagated by influencers on social media. Using a microwave can cause cancer, is one of them.

He said, "Microwave is a non-ionising radiation. It does not have the energy to change your DNA. But exposure to UVB (Ultraviolet B rays of the sun) can cause cancer."

He took on another myth: Drinking water while standing up can affect lung and heart functions and even cause arthritis. He said there isn't enough research to back this up.

Plating for children

Dr Supraja insisted on the MyPlate concept to nurture healthy eating habits in children. An ideal composition is 50% fruits and vegetables, a quarter grains (whole preferably), a quarter protein and a side of dairy products.

Dr Nath said milk is a cocktail of several minerals and vitamins, and is good for all age groups.

